# ‘ಕಾಮಿಡಿ’ ಪ್ರಯೋಗದಲ್ಲಿ ಸಂಗೀತಾ ಶೃಂಗೇರಿ

‘ಚಾರ್ಲಿ 777’ ಸಿನಿಮಾದಿಂದ ಪ್ರೇಕ್ಷಕರ ಮನಗೆದ್ದಿದ್ದ ನಟಿ ಸಂಗೀತಾ ಶೃಂಗೇರಿ, ಕಾಮಿಡಿ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ‘ಪದ್ಮನಾಭ ಅಂಡ್ ಫ್ಯಾಮಿಲಿ’ ಎಂಬ ಹಾಸ್ಯಪ್ರಧಾನ ಸಿನಿಮಾದಲ್ಲಿ ಸಂಗೀತಾ ಅಭಿನಯಿಸುತ್ತಿದ್ದು, ಈ ಸಿನಿಮಾದ ಭಾಗವಾಗಿರುವುದರ ಕುರಿತು ಎಕ್ಸೈಟ್ ಆಗಿದ್ದಾರೆ. ಭಾವನಾತ್ಮಕ ಸಿನಿಮಾಗಳಲ್ಲಿ ಅಭಿನಯಿಸಿ, ಸಂಪೂರ್ಣ ಕಾಮಿಡಿಯಾಗಿರುವ ಸಿನಿಮಾದಲ್ಲಿ ನಟಿಸುತ್ತಿರುವುದು ತಮಗೆ ಹೊಸ ಅನುಭವ ನೀಡಿರುವುದಾಗಿ ಹೇಳಿದ್ದಾರೆ.

ಈಚೆಗೆ ಮ್ಯೂಸಿಕ್ ಆಲ್ಬಂ ಒಂದರಲ್ಲಿ ಸಂಗೀತಾ ಕಾಣಿಸಿಕೊಂಡಿದ್ದರು. ಇದರ ಜೊತೆಗೆ ಕನ್ನಡ ಹಾಗೂ ತಮಿಳಿನಲ್ಲಿ ಹಾರರ್ ಸಿನಿಮಾ ಚಿತ್ರೀಕರಣವನ್ನು ಕೂಡ ಪೂರೈಸಿದ್ದಾರೆ. ಈ ಕಾಮಿಡಿ ಸಿನಿಮಾ ಮೂಲಕ ಹೊಸ ಪ್ರಯತ್ನದಲ್ಲಿ ತೊಡಗಿಕೊಂಡಿರುವುದಾಗಿ ತಿಳಿಸಿದ್ದಾರೆ.

‘ಪದ್ಮನಾಭ ಅಂಡ್ ಫ್ಯಾಮಿಲಿ’ ಸಿನಿಮಾವನ್ನು, ತುಳು ಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವ ಇಸ್ಮಾಯಿಲ್ ಮೂಡುಶೆಡ್ಡೆ ನಿರ್ದೇಶಿಸುತ್ತಿದ್ದಾರೆ. ತುಳು ಸಿನಿಮಾದಲ್ಲಿ ನಟಿಸುತ್ತಿದ್ದ ಭೋಜರಾಜ್ ವಾಮಂಜೂರು, ರಿದನ್ ಶೆಟ್ಟಿ, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಅರವಿಂದ ಬೋಳಾರ್, ಪುಷ್ಪರಾಜ್ ಬೋಳಾರ್, ಮಾನಸಿ ಸುಧೀರ್ ಮತ್ತು ಹಲವರು ತಾರಾಬಳಗದಲ್ಲಿದ್ದಾರೆ.

ಈ ಸಿನಿಮಾದಲ್ಲಿ ನಟಿಸಲು ತಮ್ಮ ತಯಾರಿಯ ಬಗ್ಗೆ ಮಾತನಾಡಿರುವ ಸಂಗೀತಾ, ‘ನಾನು ಕಾನ್ಷಿಯಸ್ ಆಗಿ ಮಂಗಳೂರು ಉಚ್ಚಾರಣೆಯನ್ನು ಕಲಿಯುತ್ತಿದ್ದೇನೆ. ಒಬ್ಬ ಪರ್ಫಾರ್ಮರ್ ಆಗಿ ನನಗಿದು ಸವಾಲು ಕೂಡ ಹೌದು. ಅಪ್ಪ ಮಗಳ ನಡುವಿನ ಸಂಬಂಧದ ಕುರಿತು ಈ ಕಥೆ ಎಕ್ಸ್‌ಪ್ಲೋರ್ ಮಾಡುತ್ತದೆ– ಇದೇ ನನ್ನನ್ನು ಸೆಳೆದ ಆಸಕ್ತಿಕರ ಸಂಗತಿ’ ಎಂದು ವಿವರಿಸಿದ್ದಾರೆ.

‘ಇದು ಹಲವರಿಗೆ ರಿಲೇಟ್ ಆಗುವಂಥ ಕಥೆ. ಈಗ ಹಣ ಸಂಪಾದಿಸುವುದನ್ನೇ ಯಶಸ್ಸು ಎಂದುಕೊಳ್ಳುತ್ತಿದ್ದೇವೆ. ಆದರೆ ಈ ಸಿನಿಮಾ, ನಮ್ಮ ಸಂಬಂಧದಲ್ಲಿ ಈ ಯಶಸ್ಸು ಅಡಗಿದೆಯೇ ಎಂಬುದನ್ನು ಪ್ರಶ್ನಿಸುತ್ತದೆ. ಜೊತೆಗೆ ನಾನು ಕಾಮಿಡಿ ಸಿನಿಮಾಗಳನ್ನು ಈ ಹಿಂದೆ ಮಾಡಿರಲಿಲ್ಲ. ಇದು ನನ್ನ ಪಾಲಿಗೆ ಒಂದು ಶಿಫ್ಟ್ ಕೂಡ ಹೌದು’ ಎಂದಿದ್ದಾರೆ.

‘ಕಾಮಿಡಿ ಸಿನಿಮಾಗಳನ್ನು ನೋಡುತ್ತಿದ್ದಾಗೆಲ್ಲಾ ನಾನು ಈ ಜಗತ್ತಿಗೆ ಫಿಟ್ ಆಗಬಹುದಾ ಎಂಬ ಪ್ರಶ್ನೆ ನನ್ನ ಮುಂದೆ ಬರುತ್ತಿತ್ತು. ಇದೀಗ ಹಾಸ್ಯ ಸಿನಿಮಾದ ಒಂದು ಭಾಗ ಆಗಿರುವುದು ಖುಷಿಯಾಗಿದೆ’ ಎಂದು ಸಂತಸವನ್ನು ವ್ಯಕ್ತಪಡಿಸಿದ್ದಾರೆ.



# ಭರವಸೆಯ ನಡೆಯಲ್ಲಿ ರಾಜವರ್ಧನ್



ಹಿರಿಯ ನಟ ಡಿಂಗ್ರಿ ನಾಗರಾಜ್ ಅವರ ಪುತ್ರ ರಾಜವರ್ಧನ್ ಹೊಸ ಪ್ರಯತ್ನಕ್ಕೆ ಕೈ ಹಾಕಿರುವುದಾಗಿ ಹೇಳಿದ್ದಾರೆ. ಪ್ಯಾನ್ ಏಷಿಯಾ ಸಿನಿಮಾ ಮಾಡುತ್ತಿರುವುದಾಗಿ ಘೋಷಿಸಿದ್ದಾರೆ. ರಾಜವರ್ಧನ್, ಇದುವರೆಗೂ ನಾಲ್ಕು ಸಿನಿಮಾಗಳಲ್ಲಿ ಅಭಿನಯಿಸಿದ್ದು, ಈ ಸಿನಿಮಾಗಾಗಿ ಕೆಲವು ವರ್ಷಗಳಿಂದ ತಯಾರಿ ಮಾಡಿಕೊಂಡಿರುವುದಾಗಿ ಮಾಹಿತಿ ನೀಡಿದ್ದಾರೆ. ಈ ಸಿನಿಮಾದಲ್ಲಿ ಅವರು ನಾಯಕನಾಗಿ ನಟಿಸುತ್ತಿದ್ದು, ಕನ್ನಡ, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ಸಿನಿಮಾ ನಿರ್ಮಾಣಗೊಳ್ಳುತ್ತಿದೆ.

ಸಿನಿಮಾ ಕುರಿತು ಮಾತನಾಡಿರುವ ಅವರು, ‘‘ಬಿಚ್ಚುಗತ್ತಿ’ ಚಿತ್ರದಿಂದ ‘ಗಜರಾಮ’ದವರೆಗೂ ಮಾಡಿರುವ ಎಲ್ಲಾ ಸಿನಿಮಾಗಳು ನನಗೆ ಒಂದೊಂದು ಬಗೆಯಲ್ಲಿ ಪಾಠ ಹೇಳಿಕೊಟ್ಟಿವೆ. ಏನು ಮಾಡಬೇಕು, ಏನು ಮಾಡಬಾರದು ಎಂದು ತಿಳಿಸಿವೆ. ನಮ್ಮದೇ ನಿರ್ಮಾಣ ಸಂಸ್ಥೆಯಿಂದ ‘ಜಾವಾ’ ಚಿತ್ರ ಸೆಟ್ಟೇರಿದೆ. ಅದರಲ್ಲಿ ರಾಗಿಣಿ ಜತೆ ನಟಿಸುತ್ತಿದ್ದೇನೆ. ಈ ಚಿತ್ರವನ್ನು ಹಲವು ಭಾಷೆಗಳಲ್ಲಿ ನಿರ್ಮಾಣ ಮಾಡುತ್ತಿದ್ದೇವೆ. ಬೇರೆ ಭಾಷೆಯ ನಿರ್ಮಾಣ ಸಂಸ್ಥೆಯಾಗಿರುವುದರಿಂದ ಅವರ ಕಡೆಯಿಂದಲೇ ಉಳಿದ ಮಾಹಿತಿಗಳು ಅಧಿಕೃತವಾಗಿ ಲಭ್ಯವಾಗಲಿದೆ’’ ಎಂದಿದ್ದಾರೆ.

‘ಕೆಜಿಎಫ್’, ‘ಕಾಂತಾರ’, ‘ಟಾಕ್ಸಿಕ್’ ರೀತಿ ದೊಡ್ಡ ಮಟ್ಟದಲ್ಲಿ ಸಿನಿಮಾ ಮಾಡಬೇಕೆಂಬುದು ರಾಜವರ್ಧನ್ ಅವರ ಕನಸಾಗಿದ್ದು, ಅದಕ್ಕಾಗಿ ಪೂರ್ವ ತಯಾರಿಯೊಂದಿಗೆ ಸಾಗಿರುವುದಾಗಿ ತಿಳಿಸಿದ್ದಾರೆ. ‘ನನ್ನ ನಿಜವಾದ ಸಿನಿಮಾ ಪಯಣ ಇಲ್ಲಿಂದ ಆರಂಭ. ನನ್ನ ಸಿನಿಮಾ ಕನಸು, ದಾರಿ, ಗುರಿ ಈ ಪ್ರಾಜೆಕ್ಟ್. ನನ್ನ ವೃತ್ತಿಜೀವನಕ್ಕೆ ಹೊಸ ತಿರುವು ನೀಡುವ ಚಿತ್ರ ಇದಾಗಲಿರುವ ಭರವಸೆಯಿದೆ’ ಎಂದು ಆತ್ಮವಿಶ್ವಾಸದಿಂದ ನುಡಿದಿದ್ದಾರೆ.

ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ಸಿನಿಮಾ ಮುಹೂರ್ತ ನೆರವೇರಿದೆ. ಇದೇ ತಿಂಗಳಿನಿಂದ ಚಿತ್ರೀಕರಣ ಪ್ರಾರಂಭವಾಗಲಿದೆ.

# ಸರೋಜಾದೇವಿಗೆ ಆಸ್ಕರ್ ನಮನ



‘ಪಂಚಭಾಷಾ ತಾರೆ’, ‘ಅಭಿನಯ ಸರಸ್ವತಿ’ ನಟಿ ಬಿ. ಸರೋಜಾದೇವಿ ಅವರ ಕೊಡುಗೆಗಾಗಿ, ಅವರ ಸುದೀರ್ಘ ಹಾಗೂ ಅಸಾಧಾರಣ ನಟನಾ ವೃತ್ತಿಜೀವನಕ್ಕಾಗಿ, ಪ್ರಸಿದ್ಧ ಆಸ್ಕರ್ ಅಕಾಡೆಮಿ ಅವರಿಗೆ ಗೌರವ ಸಮರ್ಪಿಸಿದೆ.

ಪ್ರತಿಷ್ಠಿತ 98ನೇ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಳೆದ ಒಂದು ವರ್ಷದಲ್ಲಿ ಅಗಲಿದ ಜಾಗತಿಕ ಸಿನಿಮಾ ದಿಗ್ಗಜರನ್ನು ಸ್ಮರಿಸುವ ‘ಇನ್ ಮೆಮೋರಿಯಂ’ ವಿಭಾಗದಲ್ಲಿ ಭಾರತೀಯ ಚಿತ್ರರಂಗದ ಮೇರುಕಲಾವಿದರನ್ನು ಅಕಾಡೆಮಿ ಸ್ಮರಿಸಿದೆ. ಅಧಿಕೃತ ವೆಬ್‌ಸೈಟ್‌ನಲ್ಲಿ, ಅಗಲಿದ 300ಕ್ಕೂ ಹೆಚ್ಚು ತಾರೆಗಳ ವಿಸ್ತೃತ ಪಟ್ಟಿಯನ್ನು ಪ್ರಕಟಿಸಿದೆ. ಇದರಲ್ಲಿ ಬಾಲಿವುಡ್ ಹಿರಿಯ ನಟರಾದ ಧರ್ಮೇಂದ್ರ ಮತ್ತು ಮನೋಜ್ ಕುಮಾರ್ ಅವರ ಹೆಸರಿನೊಂದಿಗೆ ತೆಲುಗಿನ ಕೋಟಾ ಶ್ರೀನಿವಾಸ ರಾವ್ ಹಾಗೂ ನಟಿ ಬಿ. ಸರೋಜಾದೇವಿ ಅವರ ಹೆಸರು ಕೂಡ ಇದೆ. ಇದು ಚಂದನವನಕ್ಕೆ ಹೆಮ್ಮೆಯ ಸಂಗತಿ.